“ಸರ್ ಬರಬೇಕಂತೆ.”

ರಾಜೀವ ಈ ಲೋಕಕ್ಕೆ ಮರಳಿದ. ಕರೆ ಕಳಿಸಿದ ಶರ್ಮಾನ ಕ್ಯಾಬಿನ್‌ನತ್ತ ನಡೆದ. ಆಶ್ಚರ್ಯವೆಂಬಂತೆ ಅಲ್ಲಿ ಶರ್ಮಾನ ಪಕ್ಕ ಕುಳಿತಿದ್ದ ರಮೇಶ್ ಸರ್ ಸಹ ಕಣ್ಣಿಗೆ ಬಿದ್ದರು.

“ಏನು ಕೆಲಸ ಮಾಡ್ತೀರ್ರೀ ರಾಜೀವ್?”

ತೀರಾ ಅನಿರೀಕ್ಷಿತವಾದ ಆ ಮಾತು ರಮೇಶ್‌ರ ಬಾಯಿಂದ ಬಂತು.

“ವರ್ಮಾ ಟ್ರೇಡರ್ಸ್‌ನವರ ಫೈಲ್ ಎಲ್ಲೋ ಕಳೆದುಹಾಕಿದೀರಂತೆ?”

ರಾಜೀವನಿಗೆ ಕಾಲ ಕೆಳಗಿನ ನೆಲ ಜರ್‍ರನೆ ಜಾರಿದಂತೆ ಭಾಸವಾಯಿತು. ಐದಾರು ತಿಂಗಳ ಕೆಳಗೆ ತನ್ನ ಕೈಗೇ ಬಂದಿದ್ದ ಫೈಲದು. ಈಗ ಹಠಾತ್ತನೆ ಕಾಣೆಯಾಗಿದೆ. ಬಹುಮುಖ್ಯ ಕಾಗದ ಪತ್ರ, ಕೊಟೇಶನ್, ಟೆಂಡರ್ ವಿವರಗಳಿದ್ದ ಅದನ್ನು ಇದೇ ಶರ್ಮಾನಿಗೆ ಕೊಟ್ಟಂತೆ ಮಾಸಲು ಮಾಸಲು ನೆನಪು ತನಗೆ. ತನ್ನೀ ಅನಿಶ್ಚಿತತೆಯನ್ನೇ ಬಂಡವಾಳವಾಗಿಸಿಕೊಂಡಿರುವ ಶರ್ಮಾ ತಾನದನ್ನು ಪಡೆದೇ ಇಲ್ಲ ಎಂದು ವಾದ ಮಾಡುತ್ತಿದ್ದಾನೆ. ಪಡೆದಿಲ್ಲವೋ ಇಲ್ಲಾ ಎಲ್ಲೋ ಇಟ್ಟು ಮರೆತು ಈಗ ತಪ್ಪನ್ನು ತನ್ನ ಮೂತಿಗೆ ಒರೆಸುತ್ತಿದ್ದಾನೋ ಹೇಗೆ ಹೇಳುವುದು? ಸದಾ ತನ್ನ ಟೇಬಲ್ ಮೇಲೆ ಫೈಲುಗಳ ಗುಡ್ಡೆ ಹಾಕಿಕೊಂಡಿರುತ್ತಾನೆ. ಅದರಲ್ಲಿ ಯಾವುದನ್ನೋ ಕಳೆದುಕೊಂಡು ತನ್ನ ಮೇಲೆ ಎಗರಾಡುತ್ತಾನೆ. ನಿನ್ನೆಯಷ್ಟೇ ಆ ಫೈಲಿನ ಬಗ್ಗೆಯೂ ಒಂದು ಸುತ್ತಿನ ವಾದ ಮುಗಿದಿತ್ತು. ಈಗದು ನೇರ ರಮೇಶ್ ಸರ್ ಟೇಬಲ್ ತನಕ ಬಂದು ತಲುಪಿದೆ. ಯಾವುದೋ ಗಡಿಬಿಡಿಯಲ್ಲಿ ಅದನ್ನು ಕೊಟ್ಟು ಮರೆತ ತನ್ನ ದುರ್ಬಲ ಸ್ಮೃತಿಶಕ್ತಿಯನ್ನು ಹಳಿದುಕೊಳ್ಳುತ್ತಾ, ಮುಂದಿನ ಬೈಗುಳಕ್ಕಾಗಿ ಎದುರುನೋಡುತ್ತಾ ನಿಂತುಕೊಂಡ ರಾಜೀವ್.

“ಯಾಕೆ ಇಷ್ಟೊಂದು ಎಡಬಿಡಂಗಿ ಕೆಲಸ ಮಾಡ್ತೀರ? ಆ ಫೈಲಿನ ಪ್ರಾಮುಖ್ಯತೆ ಗೊತ್ತಿಲ್ವ ನಿಮಗೆ? ಚಿಲ್ಲರೆಯಂತೆ ಕಳೆದುಬಿಟ್ಟಿದ್ದೀರಲ್ಲಾ ಅದನ್ನ?”

ರಮೇಶ್ ಮಾತಿಗೆ ಏನು ಹೇಳುವುದೆಂದೇ ತಿಳಿಯದೆ ತಲೆತಗ್ಗಿಸಿದ ರಾಜೀವ್. ತನ್ನದಲ್ಲದ ತಪ್ಪಿಗೆ ಇಂತಹ ಮಾತು ಕೇಳುತ್ತಿರುವುದಕ್ಕೆ ಮನಸ್ಸಿಗೆ ಹಿಂಸೆಯಾಗುತ್ತಿತ್ತು.

“ಯಾವ ಕೆಲಸ ಕೊಟ್ಟರೂ ಹೀಗೇ ಮಾಡೋದು ಇವನು. ನನಗಂತೂ ಸಾಕಾಗಿಹೋಗಿದೆ. ಹೀಗೇ ನಡೆದರೆ ಬೇರೊಬ್ಬನನ್ನು ನೋಡಿಕೊಳ್ಳಬೇಕಾಗುತ್ತದೆ!”

ಈ ಬಾರಿ ಶರ್ಮಾ ಆಡಿದ ಆ ಮಾತು ನೇರ ರಾಜೀವನ ಗೌರವಕ್ಕೇ ಇರಿಯಿತು. ತಾನೂ ಮಾಡಿರಬಹುದಾದ ತಪ್ಪು. ಅದನ್ನು ನನ್ನ ತಲೆಗೆ ಕಟ್ಟುತ್ತಿದ್ದಾನೆ! ಬೆಳಗಿನಿಂದ ಸಂಜೆಯ ತನಕ ತಾನು ಮಾಡುವ ನೂರು ಸಫಲ ಕೆಲಸಗಳನ್ನು ನೋಡದೇ ವಿಫಲವಾದದ್ದನ್ನು ಮಾತ್ರ ಎತ್ತಿಯಾಡುತ್ತಾನೆ. ಈಗಂತೂ ತೀರಾ ಏಕವಚನಕ್ಕೇ ಇಳಿದಿದ್ದಾನೆ! ರಾಜೀವನ ಆತ್ಮಗೌರವ ಕನಲಿಹೋಯಿತು.

“ಆ ಫೈಲನ್ನು ನಾನು ನಿಮಗೆ ಕೊಟ್ಟಿದ್ದೇನೆ!”

ಮೊಟ್ಟಮೊದಲಬಾರಿಗೆ ದನಿಯನ್ನು ತಾರಕಕ್ಕೇರಿಸಿದ ರಾಜೀವ್.


### ವಿನಾಯಕ ಅರಳಸುರಳಿ

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಅರಳಸುರಳಿ ಗ್ರಾಮದವರು. ಕುವೆಂಪು ವಿಶ್ವವಿದ್ಯಾಲಯದ ಬಿ.ಕಾಂ. ಪದವೀಧರ. ಬೆಂಗಳೂರಿನ ಖಾಸಗಿ ಕಂಪನಿಯೊಂದರ ಉದ್ಯೋಗಿ. ಕತೆ, ಕವನ ಹಾಗೂ ಲಲಿತ ಪ್ರಬಂಧಗಳು ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.